INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,10-19
Peer Reviewed Journal, Referred Journal

# ಡಾ.ಎಂ.ವೀರಪ್ಪ ಮೊಯಿಲಿ ಅವರ ಬರಹಗಳು: ಒಂದು ಪುನರ್ ಪರಿವೀಕ್ಷಣೆ

ಕೃತಿ. ಜಯರಾಜು.[1]

ಡಾ.ಎಂ.ವೀರಪ್ಪ ಮೊಯಿಲಿ ಅವರು ಈ ನಾಡಿನ ಜನತೆಗೆ ಒಬ್ಬ ರಾಜಕಾರಣಿಯಾಗಿ ಹೆಚ್ಚು ಹೆಚ್ಚು ಪರಿಚಿತರಾಗಿದ್ದಾರೆ. ಹಾಗೆಯೇ ಇವರು ತಮ್ಮ ಬಹುಮುಖಿ ವ್ಯಕ್ತಿತ್ವದ ಮೂಲಕ ನ್ಯಾಯವಾದಿಗಳಾಗಿ, ಹೋರಾಟಗಾರರಾಗಿ, ಒಬ್ಬ ಸೃಜನಶೀಲ ಸಾಹಿತಿಯಾಗಿ, ಕಲಾವಿದರಾಗಿ ಹಲವು ಹತ್ತು ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿದ್ದಾರೆ ಎಂಬುದನ್ನು ಗುರುತಿಸಬಹುದು. ತಳವರ್ಗದಲ್ಲಿ ಜನಿಸಿದ ಒಬ್ಬ ಮನುಷ್ಯ ಹೋರಾಟದ ಮನೋಭಾವವನ್ನು ರೂಪಿಸಿಕೊಂಡು ಸಂಘರ್ಷಗಳಲ್ಲೇ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾ ಮುನ್ನಡೆದಿರುವ ಈ ವೀರಪ್ಪ ಮೊಯಿಲಿ ಅವರು ಕರ್ನಾಟಕ ರಾಜ್ಯ ಕಂಡಿರುವಂತಹ ಅಪರೂಪದ ಸಾಧಕರು. ಇವರು ತಮಗೆ ಸಿಕ್ಕ ಸುಧೀರ್ಘ ರಾಜಕಾರಣದ ಪ್ರತಿಯೊಂದು ಹಂತದ ಅವಕಾಶಗಳಲ್ಲಿ ಕನ್ನಡ ನಾಡಿನ ಅಭಿವೃದ್ಧಿಗಾಗಿ ದೂರದೃಷ್ಟಿಯಿಂದ ಆಲೋಚನೆ ಮಾಡಿ, ಆ ಮುಖೇನ ಹತ್ತು ಹಲವು ಜನಪರವಾದಂತಹ ಯೋಜನೆಗಳನ್ನು ರೂಪಿಸಿದವರು. ಎಂ.ವೀರಪ್ಪ ಮೊಯಿಲಿ ಅವರು ತಮ್ಮ ರಾಜಕೀಯ ಬದುಕಿನ ಜೊತೆ ಜೊತೆಯಲ್ಲಿಯೇ ತಮ್ಮ ಸೃಜನಶೀಲತೆಯಿಂದ ಕಾವ್ಯ, ನಾಟಕ ಮತ್ತು ಕಾದಂಬರಿಗಳನ್ನು ರಚಿಸಿ ಕನ್ನಡ ಸಾರಸ್ವತಲೋಕಕ್ಕೆ ತಮ್ಮದೇ ಆದಂತಹ ಅಚ್ಚಳಿಯದೇ ಅಳಿಸಲಾಗದ ಮುದ್ರೆಯನ್ನು ಹಾಕಿದವರು.

ಸಾಮಾಜಿಕ ಪಿಡುಗಾಗಿರುವ ಜಾತೀಯತೆಯನ್ನು ತೊರೆದು ಮಾನವತೆಗೆ ತೊಡಕಾಗಿರುವ ಅಡ್ಡಗೋಡೆಗಳನ್ನು ಕೆಡವಿ ಸಾಮಾಜಿಕ ನ್ಯಾಯದ ಹರಿಕಾರನಾಗುವನೆಂದು ಯಾರು ಕನಸು ಕಂಡಿರಲಲ್ಲ. ಆದರೆ ಈ ದಿಕ್ಕಿನಲ್ಲಿ ಬೆಳೆಯತೊಡಗಿದ ಎಂ. ವೀರಪ್ಪ ಮೊಯಿಲಿ ಅವರ ಮಾರ್ಪಾಡಿ ಗ್ರಾಮವು ಕರಾವಳಿ ಕರ್ನಾಟಕದಲ್ಲಿ ಇದು ಒಂದು ಪುಟ್ಟ ಹಳ್ಳಿ. ಭಾರತದಲ್ಲಿ ಜಾತಿ ವ್ಯವಸ್ಥೆಯ ವ್ಯಾಪಿಸಿರುವಂತೆಯೇ ಈ ಹಳ್ಳಿಯಲ್ಲಿಯು ಇತ್ತು ಎಂಬುದನ್ನು ಗುರುತಿಸಬಹುದು. ಮೊಯಿಲಿ ಅವರದು ದೇವಾಡಿಗ ಜನಾಂಗವಾಗಿತ್ತು. ಈ ಜನಾಂಗದವರದು ದೇವಸ್ಥಾನಗಳಲ್ಲಿ, ಜಾತ್ರೆಗಳಲ್ಲಿ ವಾದ್ಯ ನುಡಿಸುವ ಕೆಲಸವಾಗಿದೆ ಅಥವಾ ತಾಸೆ ಬಾರಿಸುವ ಕೆಲಸ. ಹಾಗಾಗಿಯೇ ವೀರಪ್ಪ ಮೊಯಿಲಿ ಅವರ ತಂದೆ

[1]. **ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ತಮ್ಮಯ್ಯ ಅವರು ತಮ್ಮ ಊರಿನ ದೇವಸ್ಥಾನದಲ್ಲಿ, ಸುತ್ತ ಮುತ್ತ ನಡೆಯುವ ಜಾತ್ರೆಗಳಲ್ಲಿ ತಾಸೆ ಅಂದರೆ ತಬಲ ಬಾರಿಸುವ ದೇವರ ಸೇವೆಯ ಕಾರ್ಯಕ್ಕೆ ಹೋಗುತ್ತಿದ್ದರು.

ಕರಾವಳಿಯ ಭಾಗದಲ್ಲಿ ಪ್ರಸಿದ್ಧವಾಗಿರುವ ಯಕ್ಷಗಾನವನ್ನು ಅತಿ ಪ್ರೀತಿಯಿಂದ ನೋಡುತ್ತಿದ್ದ ವೀರಪ್ಪ ಮೊಯಿಲಿ ಅವರು ಆ ಕಲೆಯೊಂದಿಗೆ ಅನುಸಂಧಾನವಾಗಿದ್ದರು. ಬಾಲ್ಯದಲ್ಲಿಯೇ ಮೊಯಿಲಿ ಅವರಿಗೆ ಕಲಾ ಸಂಸ್ಕಾರವು ಹೆಚ್ಚು ಪರಿಚಯವೇ ಆಗಿರುತ್ತದೆ. ಹಾಗೆಯೇ, ವೀರಪ್ಪ ಮೊಯಿಲಿ ಅವರ ಕುಟುಂಬವು ತಮ್ಮ ಕುಲಕಸುಬು ವಾದ್ಯ ನುಡಿಸುವುದರ ಜೊಗೆ ಜೊತೆಗೆಯೇ ಕೃಷಿ ಕಾರ್ಮಿಕರಾಗಿ ಗೇಣಿ ಬೆಳೆಗಾರರಾಗಿ ದುಡಿದು ಬದುಕಬೇಕಾಗಿತ್ತು. ಭಾರತೀಯ ಜಾತಿಯ ಏಣಿ – ಶ್ರೇಣೀಕೃತ ವ್ಯವಸ್ಥೆಯಲ್ಲಿ ದೇವಾಡಿಗ ಜನಾಂಗವು ಸಾಮಾಜಿಕವಾಗಿ ಬಹಳ ಹಿಂದುಳಿದ ಜನಾಂಗವಾಗಿದ್ದು, ಈ ಜನಾಂಗದ ಬಹುತೇಕ ಜನರು ಕೆಳವರ್ಗದವರ ಮಾಡುವ ಕಾರ್ಯಗಳನ್ನೇ ಹೆಚ್ಚು ಮಾಡಿ ಬದುಕುತ್ತಿದ್ದರು. ಆದ್ದರಿಂದಲೇ ವೀರಪ್ಪ ಮೊಯಿಲಿ ಅವರು ಬಾಲ್ಯದಲ್ಲಿಯೇ ಹಲವಾರು ಕಷ್ಟದ ಸನ್ನಿವೇಶಗಳನ್ನು ಅನುಭವಿಸಿದರು ಮತ್ತು ಅವುಗಳನ್ನು ಎದುರಿಸಿ ಬಂದವರು. ವೀರಪ್ಪ ಮೊಯಿಲಿ ಅವರ ತಮ್ಮ ತಂದೆ ತಮ್ಮಯ್ಯ ಅವರೊಟ್ಟಿಗೆ ಕೂಲಿ ಕೆಲಸದ ಜೊತೆಗೆ ಗೇಣಿ ಬೆಳೆಗಾರರಾಗಿ ವ್ಯವಸಾಯವನ್ನು ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಈ ಕುಟುಂಬದವರಿಗೆ ಒಂದು ಸಮಸ್ಯೆ ಎದುರಾಯಿತು. ಮಳೆಗಾಲದ ಸಂದರ್ಭದ ಆ ದಿನಗಳಲ್ಲಿ ಭೂ ಮಾಲೀಕರ ತಂಡವೊಂದು ಬಂದು ನಿಷ್ಕಾರುಣ್ಯವಾಗಿ ಈ ಕುಟುಂಬವನ್ನು ಆ ಮನೆಯಿಂದ ಹೊರಗೆ ಹಾಕಿ ವ್ಯವಸಾಯ ಮಾಡುವ ಭೂಮಿಯನ್ನು ಬಿಟ್ಟುಕೊಡುವಂತೆ ದೌರ್ಜನ್ಯ ಎಸಗಿದರು. ಈ ಘಟನೆ ಬಾಲಕ ವೀರಪ್ಪ ಮೊಯಿಲಿ ಅವರ ಜೀವನ ಮತ್ತು ಚಿಂತನೆಯ ಮೇಲೆ ಎಂದೆಂದೂ ಅಳಿಯಲಾರದ ಕಹಿ ನೆನಪಿನ ಮರೆಯಲಾರದ ಘಟನೆಯಾಗಿಯೇ ಉಳಿದು ಬಿಟ್ಟಿರುತ್ತದೆ ಎಂದೇ ಹೇಳಬಹುದು. ಇವರು ಇಂದಿಗೂ ಕೂಡ ಈ ಘಟನೆಯನ್ನು ಮರೆತಿರುವುದೇ ಇಲ್ಲ. ಇದನ್ನು ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿರುತ್ತದೆ. ಈ ಘಟನೆಯ ವಿರುದ್ಧ ಪ್ರತೀಕಾರದ ಮನೋಭಾವ ಬಲವಾಗಿ ಬೇರೂರಿತು. ಉತ್ತಮ ಶಿಕ್ಷಣವನ್ನು ಪಡೆದು ಉತ್ತಮ ವ್ಯಕ್ತಿಯಾಗಿ ಈ ಸಾಮಾಜಿಕ ಅನ್ಯಾಯಗಳನ್ನು ಬುಡಸಹಿತ ಕಿತ್ತು ಹಾಕುವ ಮನೋಭಾವ ವೀರಪ್ಪ ಮೊಯಿಲಿ ಅವರಲ್ಲಿ ಮೂಡಿತು. ಈ ಬಂಡಾಯದ ಮನೋಭಾವವೇ ಮುಂದೆ ವೀರಪ್ಪ ಮೊಯಿಲಿ ಅವರನ್ನು ಒಬ್ಬ ನ್ಯಾಯವಾದಿಯಾಗಿ, ಹೋರಾಟಗಾರನಾಗಿ, ಹೆಸರಾಂತ ರಾಜಕಾರಣಿಯಾಗಿ ರೂಪಿಸಿರುತ್ತದೆ ಎಂದೇ ಹೇಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯು ಹಲವು ಭಾಷೆ, ಸಂಸ್ಕೃತಿ, ಆಚಾರ ವಿಚಾರಗಳನ್ನು ಒಳಗೊಂಡ ಒಂದು ವಿಶಿಷ್ಟ ಜಿಲ್ಲೆಯಾಗಿದೆ. ಕನ್ನಡ ಭಾಷೆಯ ಜೊತೆಗೆ ತುಳು ಮತ್ತು ಕೊಂಕಣಿಯನ್ನು ಮಾತನಾಡುವ ಜನರು ಇಲ್ಲಿದ್ದಾರೆ. ಇಲ್ಲಿನ ಜನವರ್ಗದವರಿಗೆ ದೈವ ಮತ್ತು ಭೂತಗಳ ಮೇಲೆ ಹೆಚ್ಚಿನ ರೀತಿಯಲ್ಲಿ ಭಕ್ತಿಯೂ ಕೂಡ ಇದೆ. ಮೇಲ್ವರ್ಗದವರೆಲ್ಲಾ ಸ್ಥಿತಿವಂತರಾಗಿದ್ದರೆ, ತಳವರ್ಗದಲ್ಲಿ ಅನೇಕ ಜನರು ಕನಿಷ್ಠ

ಮತ್ತು ನಿಕೃಷ್ಟ ಮಟ್ಟದ ಜೀವನವನ್ನು ನಡೆಸುವ ಸಾಮಾಜಿಕ ಸನ್ನಿವೇಶದಲ್ಲಿ ಜಾತಿ ಪದ್ಧತಿಯೆಂಬ ಕ್ರೌರ್ಯಕ್ಕೆ ಒಳಗಾಗಿ ಕೆಳಮಟ್ಟದ ಜೀವನವನ್ನು ಇಂದಿಗೂ ನಡೆಸುವವರು ಸಾಕಷ್ಟಿದ್ದಾರೆ. ಮೊಯಿಲಿ ಅವರ ದೇವಾಡಿಗ ಜನಾಂಗವು ಸಮಾಜದ ಕೆಳವರ್ಗದ ಜಾತಿಯಾಗಿದೆ. ಇದು ಈ ಪ್ರದೇಶದಲ್ಲಿ ಸಾಮಾಜಿಕವಾಗಿ ಒಂದು ರೀತಿಯಲ್ಲಿ ಅಸ್ಪೃಶ್ಯರಾಗಿಯೇ ಬೆಳೆದು ಬಂದರು ಎಂದು ಹೇಳಬಹುದು. ಕುಟುಂಬದಲ್ಲಿ ಎಷ್ಟೇ ಕಡುಬಡತನ ಮತ್ತು ಕಷ್ಟಗಳು ಇದ್ದರೂ ಕೂಡ ಎಂ.ವೀರಪ್ಪ ಮೊಯಿಲಿ ಅವರು ಉನ್ನತ ಶಿಕ್ಷಣವನ್ನು ಪಡೆದವರು. ಇವರು ಪಡೆದಿರುವಂತಹ ಶೈಕ್ಷಣಿಕ ಬಲದಿಂದಲೇ ಸಾಹಿತ್ಯ ಕ್ಷೇತ್ರದ ಕೃಷಿಯಲ್ಲಿ ಹೆಚ್ಚಿನದಾಗಿ ತೊಡಗಿಕೊಂಡು ಈ ಕ್ಷೇತ್ರಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಅವುಗಳ ಒಂದು ಪುನರ್ ಪರೀಕ್ಷಣೆಯನ್ನು ಪ್ರಸ್ತುತ ಲೇಖನದಲ್ಲಿ ಈ ಮುಂದಿನಂತೆಯೇ ಮಾಡಲಾಗಿದೆ.

ಎಂ.ವೀರಪ್ಪ ಮೊಯಿಲಿ ಅವರು ಸೃಜನಶೀಲ ಸಾಹಿತಿಯಾಗಿದ್ದು, ಒಬ್ಬ ಶ್ರೇಷ್ಠ ಚಿಂತಕರಾಗಿದ್ದು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಕೃಷಿ ಮಾಡಿರುವುದನ್ನು ಗುರುತಿಸಬಹುದು. ನಮ್ಮ ಕನ್ನಡನಾಡಿನಲ್ಲಿ ಕಂಡ ಪ್ರತಿಭಾವಂತ ರಾಜಕಾರಣಿಗಳಲ್ಲಿ ಒಬ್ಬರಾದ ಇವರು ತಮಗೆ ದೊರೆತ ಅವಕಾಶ, ಹುದ್ದೆ ಮತ್ತು ಅಧಿಕಾರಗಳಲ್ಲಿ ಮಾದರಿಯಾಗುವ ರೀತಿಯಲ್ಲಿ ಕೆಲಸ ಮಾಡಿ ತೋರಿಸಿದ್ದಾರೆ. ರಾಜಕಾರಣದ ನೆಲೆಯನ್ನು ಹೊರೆತುಪಡಿಸಿ ಇನ್ನುಳಿದ ರಂಗಗಳಲ್ಲೂ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಹುಟ್ಟು ಕವಿಯಾದವನಿಗೆ ರಾಜಕಾರಣಿಯಾಗಿ ಬಹುದೂರ ಪಯಣಿಸುವುದು ಕಷ್ಟದ ಕೆಲಸ. ಆದ್ದರಿಂದಲೇ ಮೊಯಿಲಿ ಅವರು ಸಾಂಸ್ಕೃತಿಕ ಚಹರೆಗಳನ್ನು ತಮ್ಮದನ್ನಾಗಿಸಿಕೊಂಡದ್ದು. ಹೀಗಾಗಿ ನಾಡಿನ ಹಾಗೂ ದೇಶದ ಬಹಳ ಸೂಕ್ಷ್ಮ ಅನ್ನಿಸುವ ಒಳನೋಟಗಳು ಸಹ ಅವರ ಕಣ್ಣಿಗೆ ನಾಟುವಂತೆ ಅನಾವರಣಗೊಂಡವು. ಇದರಿಂದ ಪ್ರತಿಯೊಂದು ವಿಚಾರದ ಬಗೆಗೂ ಅದರ ಆಳ–ಅಗಲಗಳನ್ನು ಅಧ್ಯಯನ ಮಾಡಿದವರು. ಹಾಗೆಯೇ, ಅಧ್ಯಯನ ಮಾಡುವುದರ ಜೊತೆಗೆ ಮುಂದಿನ ಭವಿಷ್ಯದ ಬಗೆಗೂ ಚಿಂತಿಸಿದರು. ಇದೇ ಅಲ್ಲದೇ ಮುಂದಾಲೋಚನೆಯ ಯೋಜನೆಗಳನ್ನು ರೂಪಿಸಲು ತುಡಿಯುವಂತೆ ಆಗಿರುತ್ತದೆ. ಇಂಥ ತುಡಿತ ಬಹುಶಃ ಒಬ್ಬ ಕವಿ ಸಹೃದಯನಿಗೆ ಮಾತ್ರ ಇರಲು ಸಾಧ್ಯ. ಮೊಯಿಲಿ ಅವರದು ಅಂಥ ಸಹೃದಯವೇ ಸರಿ. ಮನದಾಳದ ಸುಪ್ತ ಆಲೋಚನೆಗಳನ್ನು ರಾಜಕಾರಣದ ಬಿಡುವಿನ ವೇಳೆಯಲ್ಲಿ ಅವರು ತಮ್ಮ ಕವಿ ಹೃದಯದ ಒಳಗಣ್ಣಿನ ಮೂಲಕ ಅಭಿವ್ಯಕ್ತಗೊಳ್ಳುವಂತೆ ಮಾಡಿದರು. ಅದೇ ರಾಮರಾಜ್ಯದ ಅನ್ವೇಷಣೆಯನ್ನು ಮಾಡಲು ಪ್ರೇರಣೆ ನೀಡಿತು. ಅದರ ಕಾರಣ ಪರಿಣಾಮವೇ ಎಂ.ವೀರಪ್ಪ ಮೊಯಿಲಿ ಅವರ ಸಮಗ್ರ ಸಾಹಿತ್ಯ ಸೃಜನಶೀಲತೆಯ ಕೃಷಿಯಾಗಿದೆ.

**ಶ್ರೀರಾಮಾಯಣ ಮಹಾನ್ವೇಷಣಂ** ಎಂಬುದು ಒಂದು ಮಹಾಕಾವ್ಯವೇ ಆಗಿರುತ್ತದೆ. ಇದು 21ನೇ ಶತಮಾನದ ಕನ್ನಡ ಮೊದಲ ಮಹಾಕಾವ್ಯವೇ ಆಗಿ ಎಂ.ವೀರಪ್ಪ ಮೊಯಿಲಿ ಅವರಿಂದ

ರಚಿತಗೊಂಡಿರುತ್ತದೆ. ಭಾರತದ ಮಹಾಕಾವ್ಯವೇ ಆಗಿರುವಂತಹ ರಾಮಾಯಣವನ್ನು ತಮ್ಮ ಕಾವ್ಯದ ರಚನೆಯಲ್ಲಿ ಕಥಾವಸ್ತುವನ್ನು ಒಳಗೊಂಡಂತೆ ಈ ಒಂದು ಮಹಾಕಾವ್ಯವನ್ನು ರಾಜಕಾರಣಿಯಾಗಿರುವ ಕವಿಗಳು ಇದನ್ನು ಐದು ಸೋಪಾನಗಳಲ್ಲಿ ರಚಿಸಿದ್ದಾರೆ. 2007ರಲ್ಲಿ ಸಮಗ್ರ ಸಂಪುಟವು ಹೊರ ಬಂದಿರುತ್ತದೆ. ಮೊಯಿಲಿ ಅವರು ತಮ್ಮ ಈ ಮಹಾಕಾವ್ಯದಲ್ಲಿ ವಾಲ್ಮೀಕಿ ರಾಮಾಯಣದ ಸೌಂದರ್ಯ ಸ್ಥಾನಗಳನ್ನು, ರಸ ಸ್ಥಾನಗಳನ್ನು ಪಡಮೂಡಿಸಿದ್ದಾರೆ. ಯಜ್ಞದ ವರ್ಣನೆಯಾಗಲಿ, ಧರ್ಮದ ವಿಷಯವಾಗಲಿ ಸಮಕಾಲೀನ ಪ್ರಜ್ಞೆಯೊಂದಿಗೆ ಸೃಷ್ಟಿಸಿದವರು. ಈ ಮಹಾಕಾವ್ಯ ಮೂಲ ನೆಲೆ ಮತ್ತು ಸೆಲೆಯೂ ಮಾನವೀಯತೆಯೇ ಆಗಿದೆ. ದಶರಥ ಮಹಾರಾಜನು ತನ್ನ ಅಶ್ವಮೇಧಯಾಗ ಮಾಡುವಾಗ ಭಿಕ್ಷುಕನೊಬ್ಬ ಎಂಜಲು ಎಲೆಯಲ್ಲಿ ಉಳಿದ ಅನ್ನ ತಿನ್ನುವುದನ್ನು ನೋಡುತ್ತಾನೆ. ಆಗ ದಶರಥನು ಅವನನ್ನು ಕರೆಸಿ ಗೌರವಪೂರ್ವಕವಾಗಿ ಸತ್ಕರಿಸಿ ಊಣಬಡಿಸುತ್ತಾನೆ. ಮೊಯಿಲಿ ಅವರು ತಿರಸ್ಕೃತ ಲೋಕದ ವಿವರಗಳನ್ನು ಮುಖ್ಯ ವಸ್ತುವಿಗೆ ಜೋಡಿಸಿ, ಅದು ಸಮಕಾಲೀನವಾಗುವಂತೆ ಗುರುತಿಸಿದ್ದಾರೆ. ಪೊಲಿ, ನಾಗಮಂಡಲ, ಕೆಡ್ಡಸ, ಕೋಮುವಾದದ ತಿರಸ್ಕಾರ, ಭಿಕ್ಷಾಟನ ನಿರ್ಮೂಲನೆ, ಏಕಾಧಿಪತ್ಯದ ವಿರುದ್ಧವಾಗಿ ಪ್ರಜಾಪ್ರಭುತ್ವದ ಸ್ಥಾಪನೆ, ಮಹಿಳಾ ಶೋಷಣೆಯ ತಿರಸ್ಕಾರ ಮತ್ತಿತರ ವಿಷಯಗಳನ್ನು ಮಹಾಕಾವ್ಯದುದ್ದಕ್ಕೂ ಕಂಡುಬರುತ್ತದೆ ಪಾದುಕ ಪ್ರಧಾನವಾದದ ಇಡೀ ವಿವರಗಳು ಅಧಿಕಾರದ ತ್ಯಾಗದ ಒಂದು ಅದ್ಭುತ ಪ್ರಸಂಗವಾಗಿ ಮೈತಳೆದಿರುತ್ತವೆ ಎಂದು ಹೇಳಬಹುದು. ಅಧಿಕಾರ ರಾಜಕಾರಣವೇ ಎಲ್ಲೆಲ್ಲೂ ಮೆರೆಯುತ್ತಿರುವಾಗ ಈ ಬಗೆಯ ಅಧಿಕಾರ ತ್ಯಾಗದ ಕತೆಗೆ ವಿಶೇಷ ಮಹತ್ವ ಸಲ್ಲುತ್ತದೆ. ಜಾಬಾಲಿಯ ಮೂಲಕ ವಿವರಿಸಲಾದ ಲೋಕಾಯತ ಧರ್ಮದ ವಿವರಗಳು ಕೂಡಾ ಮನೋಜ್ಞವಾಗಿದೆ. ರಸವತ್ತಾದ ಸನ್ನಿವೇಶಗಳಿಂದ ಕೂಡಿರುವ ಈ ಕಾವ್ಯವು ಓದುಗರ ಹೃದಯವನ್ನು ಸೂರೆಗೊಳ್ಳುತ್ತದೆ ಎಂದೇ ಹೇಳಬಹುದು.

ಎಂ.ವೀರಪ್ಪ ಮೊಯಿಲಿ ಅವರು ಮೂರು ನಾಟಕಗಳನ್ನು ಕೂಡ ರಚಿಸಿದ್ದಾರೆ. ಅವುಗಳೆಂದರೆ; 'ಪ್ರೇಮವೆಂದರೆ', 'ಪರಾಜಿತ' ಮತ್ತು 'ಮಿಲನ'. ಈ ನಾಟಕಗಳ ಕಥಾವಸ್ತುವೂ ಎಲ್ಲಾ ಕಾಲಕ್ಕೂ ಅನ್ವಯವಾಗುತ್ತದೆ. ಮಾನವ ಬದುಕಿನ ಮೂಲ ನೆಲೆ ಮತ್ತು ಸೆಲೆಯಾದ ಪ್ರೀತಿ ಪ್ರೇಮ ಹಾಗೂ ಮನುಷ್ಯನ ಸ್ಥಾನ, ಮಹಿಳೆಯ ಅಸಹಾಯಕತೆಯಂತಹ ವಿಷಯಗಳನ್ನು ಬಹುಮುಖ್ಯವಾಗಿಯೇ ಒಳಗೊಂಡಿದೆ. ಮೊಯಿಲಿ ಅವರ ಮೊದಲ ಹಂತದ ಬರವಣಿಗೆಯ ಅಧ್ಯಯನಕ್ಕೆ ಈ ಮೂರು ನಾಟಕಗಳನ್ನು ಬಳಸಿಕೊಳ್ಳಬಹುದಾಗಿದೆ. **'ಪ್ರೇಮವೆಂದರೆ'** ಎಂಬಂತಹ ನಾಟಕವು ಮೊಯಿಲಿ ಅವರ ಮೊದಲ ನಾಟಕವೇ ಆಗಿರುತ್ತದೆ. ಗಿರೀಶ, ಕಲ್ಪನಾ, ಮೋಹನ ಈ ನಾಟಕದ ಪ್ರಮುಖ ಪಾತ್ರಧಾರಿಗಳು ಇದರಲ್ಲಿ ಬರುತ್ತಾರೆ. ಈ ಮೂವರು ಕೂಡ ಸಹಪಾಠಿಗಳೇ ಆಗಿದ್ದರು. ಅದರಲ್ಲೂ ಗಿರೀಶ್ ಕಲ್ಪನಾ ಸಂಬಂಧಿಗಳು. ಗಿರೀಶನಿಗೆ ಕಲ್ಪನಾ ಸೋದರ ಮಾವನ ಮಗಳು. ತ್ರಿಕೋನ ಪ್ರೇಮಕತೆಯಲ್ಲಿ ಸಾಗುವ ಈ ನಾಟಕವು ಸಾಮಾಜಿಕ ಕಥಾವಸ್ತುವನ್ನು ಕೂಡ ಬಹುಮುಖ್ಯವಾಗಿಯೇ ಒಳಗೊಂಡಿದೆ. ಗಿರೀಶ

ಹಾಗೂ ಕಲ್ಪನಾ ಪ್ರೇಮಿಗಳಾದರು ಅವರ ಪ್ರೇಮಕ್ಕೆ ಕೌಟುಂಬಿಕ ಕಲಹಗಳು ಅಡ್ಡ ಬರುತ್ತವೆ. ಗಿರೀಶನ ಸಾವಿನೊಂದಿಗೆ ಅಂತ್ಯವಾಗುವ ಈ ನಾಟಕವು ದುರಂತದಲ್ಲಿ ಕೊನೆಗೊಳ್ಳುತ್ತದೆ. ಪ್ರೀತಿ ಮತ್ತು ಪ್ರೇಮಗಳಗಿಂತ ವೈಯುಕ್ತಿಕ ಪ್ರತಿಷ್ಠೆಗಳೇ ಮೇಲುಗೈ ಪಡೆಯುತ್ತವೆ ಎಂಬುದು ಈ ಇಡೀ ನಾಟಕದಲ್ಲಿನ ಪಾತ್ರಗಳು ಸಹಜತೆಯಿಂದ ಕೂಡಿದ್ದರೂ ಮನಸ್ಸಿನ ಒಳತೋಟಗಳ ಬಗೆಗೆ ವಿಚಾರ ಮಾಡಿದಾಗ ಪೋಷಣೆಯ ಕೊರೆತೆ ಕಂಡುಬರುತ್ತದೆ.

**'ಪರಾಜಿತ'** ಎಂಬಂತಹ ಈ ನಾಟಕವು ಭಿನ್ನ ಕಥಾವಸ್ತುವನ್ನು ಒಳಗೊಂಡಿದೆ. ಹರೀಶ ಮತ್ತು ವಸಂತ ಇಬ್ಬರು ಆಪ್ತ ಮಿತ್ರರು. ಹರೀಶ ಮದುವೆ ವಿಷಯದಲ್ಲಿ ವಂಚನೆಗೆ ಒಳಗಾಗಿದ್ದರೂ ಪಾಲಿಗೆ ಬಂದಿದ್ದು ಪಂಚಾಮೃತ ಎಂದು ಸ್ವೀಕರಿಸುವ ಮನೋಭಾವದವನ್ನು ಹೊಂದಿರುತ್ತಾನೆ. ತಾನು ಮದುವೆಯಾಗುವ ಹುಡುಗಿ ಇಂದುವಿಗೆ ಆನೆಕಾಲು ರೋಗವಿದ್ದರೂ ಮದುವೆಯಾಗಿ ಜೊತೆಯಲ್ಲಿಯೇ ಬಾಳಲು ನಿರ್ಧರಿಸುತ್ತಾನೆ. ಸುಬ್ಬಣ್ಣ ಮತ್ತು ಕಾವೇರಮ್ಮರಂತಹ ಪೊಷಕ ಪಾತ್ರಗಳು ಈ ನಾಟಕದಲ್ಲಿ ಚೆನ್ನಾಗಿ ಮೂಡಿಬಂದಿವೆ. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳ ಸಮಸ್ಯೆಗಳ ಸುತ್ತಾ ಮಹಿಳೆಯ ಬದುಕಿನ ಅತಂತ್ರ ಸ್ಥಿತಿಯನ್ನು ಕುರಿತು ಈ ನಾಟಕ ಮೂಡಿಬಂದಿದೆ. ಹರೀಶ ನಾನು ಓದಿ ಪದವಿಧರನಾದರೂ ನನ್ನ ಬದುಕು ಹಸನಾಗಲಿಲ್ಲ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ನಾನು 'ಪರಾಜಿತ'ನೇ ಆದೆ ಎನ್ನುವ ವಿಷಾದದೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ಗುರುತಿಸಲಾಗಿದೆ.

**'ಮಿಲನ'** ಎಂಬಂತಹ ಇದು ಮೊಯಿಲಿ ಅವರ ಮೂರನೆಯ ನಾಟಕವಾಗಿರುತ್ತದೆ. ಪ್ರೀತಿಯ ಜೊತೆಗೆ ಮನುಷ್ಯನ ಸಣ್ಣತನ, ಮೋಸ, ವಂಚನೆಗಳ ಅನಾವರಣಗೊಳಿಸುವ ಈ ನಾಟಕ ಸತ್ಯಕ್ಕೆ ಸಾವಿಲ್ಲ ಎನ್ನುವ ಸಂದೇಶವನ್ನು ಸಾರುವುದರ ಮೂಲಕ ಕೊನೆಗೊಳ್ಳುತ್ತದೆ. 'ಮಿಲನ' ನಾಟಕದ ಪಾತ್ರಗಳೆಲ್ಲ ಮೊದಲೇ ಸಿದ್ದಪಡಿಸಿದ ಕಪ್ಪು ಬಿಳುಪಿನ ಪಾತ್ರಗಳು. ಆದರ್ಶವಾದಿಯಾದ ಕೆರೆಮನೆ ತಿಮ್ಮಪ್ಪ, ಅವನ ಆದರ್ಶಗಳನ್ನು ಸಾಕಾರಗೊಳಸಲು ಕಂಕಣಬದ್ಧವಾಗಿರುವ ಅವರ ಮಗ ಶೇಖರ. ಅದೇ ಆದರ್ಶಗಳನ್ನು ಮೈತುಂಬ ತುಂಬಿಕೊಂಡು ಸುಂದರ ಕನಸುಗಳನ್ನು ಕಟ್ಟುತ್ತಾ ಶೇಖರನಲ್ಲಿ ಅನುರಕ್ತಳಾಗಿರುವ ಶಾರದ. ಶಾರದಾ ಶೇಖರ ಇವರಿಬ್ಬರ ಪ್ರೇಮಕ್ಕೆ ಅಡ್ಡಿಯಾಗಿರುವ ಅವಳ ಸಾಕು ತಂದೆ ನಯವಂಚಕನಾದ ಸೀತಾರಾಮಯ್ಯ, ಸುಬ್ಬಣ್ಣ ಮುಂತಾದವರು. ಸುಬ್ಬಣ್ಣ, ಸೀತಾರಾಮಯ್ಯ ಮಾಡುವ ವಂಚನೆಗಳಗೆಲ್ಲ ಕುಮ್ಮಕ್ಕು ನೀಡುವ ಪೋಲಿಸ್ ಅಧಿಕಾರಿ ಕೇಶವರಾಯ. ಸುಬ್ಬಣ್ಣ, ಸೀತಾರಾಮಯ್ಯ ಅವರ ಮೋಸ, ವಂಚನೆಗಳಗೆ ಶ್ರೀನಿವಾಸ ಅಯ್ಯರ್, ಗೋಪಾಲಯ್ಯ, ಚೆನ್ನಿ, ನಿಂಗಿ, ಕೆರೆಮನೆ ತಿಮ್ಮಪ್ಪಯ್ಯ. ಹೀಗೆ, ಸಾಲು ಸಾಲಾಗಿ ಬಲಿಯಾಗುತ್ತಾರೆ. ನಿಷ್ಠ ಪೋಲಿಸ್ ಅಧಿಕಾರಿ ಮಾದವರಾಯನ ಪ್ರವೇಶದಿಂದಾಗಿ ದುಷ್ಟರಿಗೆ ಶಿಕ್ಷೆಯಾಗುವುದರ ಮೂಲಕ ನಾಟಕ ಸುಖಾಂತವಾಗುತ್ತದೆ. ಶೇಖರನಿಗೆ ಬಿಡುಗಡೆಯಾಗಿ ಅವನು ಶಾರದಾಳನ್ನು ಮದುವೆಯಾಗುವುದರ ಮೂಲಕ ನಾಟಕ ಕೊನೆಯಾಗುತ್ತದೆ ಎಂಬುದನ್ನು ಇಲ್ಲಿ ತಳಸ್ಪರ್ಶಿಯಾಗಿ ಗುರುತಿಸಲಾಗಿದೆ.

ಡಾ.ಎಂ.ವೀರಪ್ಪ ಮೊಯಿಲಿ ಅವರ **ಕವನ ಸಂಕಲನಗಳೆಂದರೆ; 'ಮತ್ತೆ ನಡೆಯಲಿ ಸಮರ'** ಎಂಬಂತಹ ಈ ಕವನ ಸಂಕಲನವು 1985ರಲ್ಲಿ ಪ್ರಕಟಗೊಂಡಿರುತ್ತದೆ. ಇದು ಆಗಲೇ ಎರಡನೆಯ ಆವೃತ್ತಿಯನ್ನು ಕಂಡಿರುತ್ತದೆ. ಇದು ಸರಿಸುಮಾರು ಹನ್ನೆರಡು ಕವನಗಳ ವ್ಯಾಪ್ತಿಯನ್ನು ಹೊಂದಿರುವ ಈ ಕಾವ್ಯಕೃತಿಯು ನಮ್ಮ ಆಧುನಿಕ ಕನ್ನಡ ಕಾವ್ಯಲೋಕ ನಡೆದು ಬಂದ ಹೆಜ್ಜೆ ಗುರುತುಗಳ ಆಶಯವನ್ನು ಪ್ರಕಟಪಡಿಸುವ ವಸ್ತು ವಿಸ್ತಾರವನ್ನು ಹೊಂದಿದೆ ಎಂದೇ ಹೇಳಬಹುದು.

**'ಹೀಗೊಂದು ಯಕ್ಷಪ್ರಶ್ನೆ';** ಸತತ ಹುಡುಕಾಟ ಈ ಕವನ ಸಂಕಲನದ ಪ್ರಧಾನ ಆಶಯ. ಇಲ್ಲಿ ಯಾರೂ ಮುಖ್ಯರಲ್ಲ, ಯಾವುದೂ ಮುಖ್ಯವಲ್ಲ. ಯಾವುದನ್ನು ಗೆರೆಕೊರೆದು ಛಿನ್ನ ಗೊಳಿಸಲು ಸಾಧ್ಯವಿಲ್ಲ ಎನ್ನುವ ಸಾರ್ವಕಾಲಿಕ ಸತ್ಯ–ತತ್ವವನ್ನು ಇಲ್ಲಿಯ ಕವಿತೆಗಳ ಮೂಲಕ ಕವಿಗಳು ಸಾಕ್ಷಾತ್ಕರಿಸಿದ್ದಾರೆ. ಸೃಜನಶೀಲ ಮನಸ್ಸಿನ ಅನ್ವೇಷಣೆ ಈ ಸಂಕಲನದ ಮುಖ್ಯ ಬಿಂದು. ಈ ತನ್ಮಯತೆಯ ಗತಿಶೀಲತೆಗೂ ಹಲವು ಬೇರುಗಳು ಇವೆ. ಹೀಗೊಂದು ಯಕ್ಷ ಪ್ರಶ್ನೆ ಸಂಕಲನದ ಎಲ್ಲಾ ಕವಿತೆಗಳು ಬಯಲ ಬದುಕಿಗೆ ಪ್ರಾಮುಖ್ಯತೆ ನೀಡಿದೆ. ಕವಿಯ ತುಡಿತದ ತಿರುಳು ಇದೇ ಆಗಿದೆ. ಬದುಕು ಅರಳಬೇಕಾಗಿದ್ದೆ ಬಯಲಿನಲ್ಲಿ. ಅರಳುವ ಕ್ರಿಯೆ ಬಹಿರಂಗದಲ್ಲಿ ಸಾಕಷ್ಟು ಪ್ರತಿರೋಧವನ್ನು ಅನಿವಾರ್ಯವಾಗಿ ಎದುರಿಸಲೇ ಬೇಕಾಗಿದೆ. ಈ ಅನಿವಾರ್ಯತೆಯ ಸಂಘರ್ಷ ಯಾವ ಸ್ವರೂಪದ್ದೂ ಎಂಬ ಸತ್ಯ ಅರಳುವ ಪ್ರಕ್ರಿಯೆಗೆ ಮಾತ್ರ ಅನುಭವ ಜನ್ಯ. ಬಯಲ ಬದುಕು ನಿಜ ಬದುಕಾಗಬೇಕಾದರೆ ಅಂತರಂಗ ನಿಷ್ಕಲ್ಮಶವಾಗಿರಬೇಕು. ಬದುಕು ಪಾರದರ್ಶಕವಾಗಿರಬೇಕು. ಸಮಾನತೆ, ಪ್ರೀತಿ, ಗೌರವ ಹೊಂದಿರಬೇಕು. ದ್ವೇಷ, ಕ್ರೌರ್ಯ, ಹಿಂಸೆ, ಈರ್ಷ್ಯೆ, ಸ್ವಾರ್ಥಗಳನ್ನು ಮೀರಿರಬೇಕು. ಗುಣಾವಗುಣಗಳನ್ನು ಪಕ್ವತೆಯ ಅಗ್ನಿದಿವ್ಯಕ್ಕೊಪ್ಪಿಸುವ ದೃಢ ಮನಸ್ಸಿನ ಸಾಕಾರವಾಗಬೇಕು. ಹೀಗಾದಲ್ಲಿ ಮಾತ್ರ ಬಯಲ ಬದುಕು ದಕ್ಕುವ, ಒಪ್ಪುವ ಸಾಧ್ಯತೆಯಿದೆ. ಕವಿಗಿರುವ ಈ ಪ್ರಜ್ಞೆಯ ಅರಿವಿನಲ್ಲೆ ತ್ಯಾಗವಿಕ್ರಮನಿವನು ಯುಗಾದಿ, ಹಣ, ದೇವನೆಂಬ ಸ್ವಾರ್ಥಿ, ಗಾಂಧಿರೇಖೆ, ಹೀಗೊಂದು ಯಕ್ಷ ಪ್ರಶ್ನೆ ಕವಿತೆಗಳು ಮೈದಾಳಿದಿರುವುದು ಕಂಡುಬರುತ್ತದೆ.

**'ಜೊತೆಯಾಗಿ ನಡೆಯೋಣ'** ಎಂಬ ಸಂಕಲನದ ಶೀರ್ಷಿಕೆಯು ಹಲವು ಹತ್ತು ಕಾರಣಗಳಿಗಾಗಿ ಅರ್ಥಪೂರ್ಣವೆನಿಸಿದೆ. ಜೊತೆಯಾಗಿ ನಡೆಯೋಣ ಎಂಬ ಹೆಸರಿನ ಕವನವೂ ಈ ಸಂಕಲನದಲ್ಲಿದೆ. ಮೊಯಿಲಿ ಅವರ ಸಹಧರ್ಮಿಣಿಯಾದಂತಹ ಮಾಲತಿ ಮೊಯಿಲಿ ಅವರ ಕವಿತೆಗಳೂ ಇದೇ ಸಂಕಲನದಲ್ಲಿವೆ. ಸಂಸಾರಿಕ ಬದುಕಿನಲ್ಲಿ ಮಾತ್ರವಲ್ಲದೆ ಸಾಹಿತ್ಯದ ಬದುಕಿನಲ್ಲೂ 'ಜೊತೆಯಾಗಿ ನಡೆಯುವ' ಮನೋಧರ್ಮ ಅವರದು. ಆ ಕಾರಣಕ್ಕಾಗಿಯೇ ಕವನ ಸಂಕಲನದ ಶೀರ್ಷಿಕೆ ಅರ್ಥಪೂರ್ಣವೆನಿಸಿದೆ. ಬದುಕಿನ ಬಹುತೇಕ ಎಲ್ಲಾ ಬಗೆಯ ಅನುಭವಗಳಿಗೂ ಮೊಯಿಲಿ ಅವರು ತಮ್ಮ ಕವನಗಳ ಮೂಲಕ ಸ್ಪಂದಿಸಿದ್ದಾರೆ. ಪ್ರೀತಿ–ಪ್ರೇಮ ಆದರ್ಶಗಳನ್ನು ಪ್ರತಿಪಾದಿಸುವ ಕವನಗಳು ಕೆಲವಾದರೆ, ಅಸಮಾನತೆ ಬಡತನ, ಹಸಿವು, ಶೋಷಣೆಗಳಿಗೆ ಮಾನವೀಯ ನೆಲೆಯಲ್ಲಿ ಸ್ಪಂದಿಸುವ

ಕವಿತೆಗಳು ಇನ್ನು ಕೆಲವು. ಈಗಾಗಲೇ ಪ್ರಸ್ತಾಪಿಸಿದ ಜೊತೆಯಾಗಿ ನಡೆಯೋಣ ಕವನವು ಪ್ರೀತಿಯ ಜತೆಗೆ ಸಹಬಾಳ್ವೆಗಾಗಿಯೂ ತುಡಿಯುತ್ತದೆ. "ಪ್ರೇಮ ಚಿರಂತನ" ಎಂಬ ಕವಿತೆಯು ಚಿರಂತನವಾದ ಆದರ್ಶ ಪ್ರೇಮದ ಕಲ್ಪನೆಯನ್ನು ಹೊಂದಿದೆ. "ಜಾತಿ ವಿಷಕನ್ಯೆ" ಎಂಬ ಕವಿತೆಯು ಸಮಾಜದಲ್ಲಿನ ಜಾತಿಯತೆಯ ಪಿಡುಗಿಗೆ ಮಿಡಿದರೆ, 'ಹಸಿವು ರಣಹದ್ದು' ಕವಿತೆಯು ಬಡತನ ಅಥವಾ ಹಸಿವಿನ ಕರಾಳ ಮುಖಕ್ಕೆ ಕನ್ನಡಿ ಹಿಡಿಯುತ್ತದೆ. ಪ್ರಾಕೃತಿಕ ರಮಣೀಯತೆಯೂ ಮೊಯಿಲಿ ಅವರ ಕವಿ ಮನಸ್ಸನ್ನು ಸೆಳೆದಿದೆ. 'ಹೈಮಾಚಲ ಕೃತಿ ರೂಪ' ಎಂಬ ಕವಿತೆಯಲ್ಲಿ ಕವಿ ಹಿಮಾಲಯದ ಭವ್ಯತೆಯನ್ನು ರೂಪಕಾತ್ಮಕವಾಗಿ ಕಟ್ಟಿಕೊಡುತ್ತಾರೆ.

ವಸಾಹತುಶಾಹಿ ಮತ್ತು ಅಧಿಕಾರಶಾಹಿಗಳ ಅತಿರೇಕಗಳನ್ನು ಮೊಯಿಲಿ ಅವರ ಕವಿ ಮನಸ್ಸು ಸಹಿಸುವುದಿಲ್ಲ. ವಸಾಹತುಶಾಹಿ ಆಡಳಿತವು ಇಂದಿಗೂ ತಮ್ಮನ್ನು ಭೂತವಾಗಿ ಕಾಡುತ್ತಿರುವುದರ ಬಗೆಗೆ ಕವಿ ವಿಷಾದ ವ್ಯಕ್ತಪಡಿಸುತ್ತಾರೆ. ಸ್ವತಃ ರಾಜಕಾರಣಿಯಾಗಿ ರಾಜಕೀಯದ ಉನ್ನತ ಸ್ಥಾನದಲ್ಲಿದ್ದ ಮೊಯಿಲಿ ಅವರು ಅಧಿಕಾರದ ಒಳ ಹೊರಗನ್ನು ಹತ್ತಿರದಿಂದ ಬಲ್ಲವರು. ಹಾಗಾಗಿಯೇ "ಅಧಿಕಾರ ಮಯಾಲೋಕ"ವೆಂಬ ಕವಿತೆಯನ್ನು ಬರೆಯಲು ಅವರಿಗೆ ಸಾಧ್ಯವಾಯಿತು. ಹೀಗೆ, ಒಟ್ಟಾರೆಯಾಗಿ; 13 ಕವಿತೆಗಳು ವಿಭಿನ್ನ ಅನುಭವಗಳನ್ನು ಅಭಿವ್ಯಕ್ತಪಡಿಸುತ್ತದೆ.

**'ಸತಿಪತಿಗಳೊಂದಾದ ಭಕ್ತಿ'**: 'ಹಾಲುಜೇನು' (ಸಮಗ್ರ ಕವಿತೆಗಳು) ಎಂ.ವೀರಪ್ಪ ಮೊಯಿಲಿ ಹಾಗೂ ಮಾಲತಿ ಮೊಯಿಲಿ ದಂಪತಿಗಳ ಸಮಗ್ರ ಕವಿತೆಗಳ ಸಂಗ್ರಹವೇ ಆಗಿರುತ್ತದೆ. ಸತಿಪತಿಗಳೊಂದಾಗಿ ಕಾವ್ಯ ಕೃಷಿಯಲ್ಲಿ ತೊಡಗಿದ ಫಲವೇ ಈ ಸಮಗ್ರ ಕವಿತೆಗಳ ಸಂಕಲನ. ಆದರ್ಶ ದಾಂಪತ್ಯ ಅಪರೂಪವೆನ್ನಿಸುವ ಈ ಕಾಲದಲ್ಲಿ ಪತಿ ಪತ್ನಿಯರಿಬ್ಬರು ತಮ್ಮ ತಮ್ಮ ಆಸಕ್ತಿಗಳನ್ನು ಗುರುತಿಸಿಕೊಂಡು ಪರಸ್ಪರ ಪ್ರೋತ್ಸಾಹಿಸಿ, ಪರಿಷ್ಕರಿಸಿ, ಸಾಹಿತ್ಯಾಸಕ್ತಿಯನ್ನು ಬೆಳಸಿಕೊಂಡು, ಬರವಣಿಗೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಪರಿ ಅಚ್ಚರಿ ಹುಟ್ಟಿಸುವಂತಹುದು.

ಮೊಯಿಲಿ ಅವರ ಕಾವ್ಯ ಭಾಷೆ ಮೊನಚುಗೊಳ್ಳುವುದು ಅವರ ಖಾಸಗೀ ಬದುಕಿನ ಅನುಭವವನ್ನು ಕಾವ್ಯವಾಗಿಸುವಲ್ಲಿ ಇದನ್ನು ಅವರ ಅನೇಕ ಪದ್ಯಗಳಲ್ಲಿ ಕಾಣಬಹುದು. ಈ ಕವನ ಸಂಕಲನದಲ್ಲಿರುವ ಬೆನ, ಅಮ್ಮ, ಕುಡಿಯ ಕುಡಿ ಮೊದಲಾದ ಕವನಗಳಲ್ಲಿ ಅವರ ಕಾವ್ಯ ಸಂಭ್ರಮ ಪಡುತ್ತದೆ. ಕಾವ್ಯದ ತೆಕ್ಕೆಗೆ ಒಳಗೊಳ್ಳುವ ಅನೇಕ ಅಭಿವ್ಯಕ್ತಿಗಳು ಅಲ್ಲಲ್ಲಿ ಮಿಂಚುತ್ತವೆ. ಹೀಗೆ ಕನ್ನಡ ಕಾವ್ಯ ಲೋಕದ ಈ ಹಿರಿಯ ದಂಪತಿಗಳು ತಮ್ಮ ಸಾಂಘಿಕ ಪ್ರಯತ್ನದಿಂದ ಕನ್ನಡ ಸಾಹಿತ್ಯಾಸಕ್ತರಿಗೆ, ಕಾವ್ಯ ಪ್ರೇಮಿಗಳಿಗೆ ಈಗಾಗಲೇ ಪರಿಚಿತರಾಗಿ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎನ್ನುವ ಮಾತನ್ನು ನಿಜವಾಗಿಸಿದ್ದಾರೆ.

**ಸಂಕೀರ್ಣ ಕೃತಿಗಳು**: **'ನುಡಿ ಕಾಣಿಕೆ'**: ಜನರ ದನಿಯಾಗಿ, ನಾಡಿಗೆ ಋಣಿಯಾಗಿ, ನುಡಿಗೆ ಕಾಣಿಕೆಯಾಗಿ ನೀಡಿದ ಕನಸುಗಳ ಮೊತ್ತವೇ 'ನುಡಿಕಾಣಿಕೆ' ಸಂಕಲನ. ತಾವು ನಾಡಿನ

ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ನಾಡಿಗೆ, ನುಡಿಗೆ ಏನೆಲ್ಲಾ ಮಾಡಬಹುದು, ನೀಡಬಹುದು ಎಂಬುದನ್ನು ಚಿಂತನೆ ಮಾಡಿದ ಎಂ.ವೀರಪ್ಪ ಮೊಯಿಲಿ ಅವರ ಆಯ್ದ ಭಾಷಣಗಳು ಇದರಲ್ಲಿ ಸೇರಿವೆ. ನಾಡಿನ ಚರಿತ್ರೆಯ ನೆನಪಿನಲ್ಲಿ ಉಳಿಯುವಂಥ ಮಾತುಗಳನ್ನಾಡಿದ ಮೊಯಿಲಿ ಅವರ ಆಯಾ ಸಂದರ್ಭದಲ್ಲಿ ನೀಡಿದ ಕಾಣಿಕೆಗಳೊಂದಿಗೆ ಇವುಗಳನ್ನು ದಾಖಲಿಸಿದ್ದಾರೆ. ಒಬ್ಬ ಧೀಮಂತ, ಪ್ರಾಮಾಣಿಕ ರಾಜಕಾರಣಿಯಾಗಿಯಷ್ಟೇ ಅಲ್ಲದೆ ಒಬ್ಬ ಸೂಕ್ಷ್ಮ ಸಂವೇದನೆಯ ಸಾಹಿತ್ಯಜೀವಿಯ ಆಲೋಚನೆಗಳು ಹೇಗಿರುತ್ತವೆ ಎಂಬುದು ಅವರ ಅಧಿಕಾರಾವಧಿಯ ನಿರ್ಣಯಗಳಿಂದಲೂ ಸಾಬೀತು ಆಗಿವೆ. ಅದರಲ್ಲೂ ಕನ್ನಡ ಭಾಷೆಯಲ್ಲಿ ದೊರೆಯಬೇಕಾದ ಸ್ಥಾನಮಾನ, ಆಡಳಿತ ಹಾಗೂ ಉದ್ಯೋಗದ ಅವಕಾಶಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ, ಈ ನಾಡಿನ ಸಾಹಿತ್ಯಕ್ಕೆ, ಸೃಷ್ಟಿಶೀಲರಿಗೆ ಜಗತ್ತಿನಾದ್ಯಂತ ದೊರೆಯಬೇಕಾದ ಮಾನ್ಯತೆಗಳ ಬಗೆಗೆ ಅವರು ಆಡಿರುವ ಮಾತುಗಳೇ ಸಾಕ್ಷಿ. ಕನ್ನಡ ಕನ್ನಡಿಗ ಕರ್ನಾಟಕ ಈ ಪರಿಕಲ್ಪನೆಗಳಿಗೆ ನ್ಯಾಯ ಸಲ್ಲಬೇಕಾದ ದಿಸೆಯಲ್ಲಿ ಮೊಯಿಲಿ ಅವರ ವಿಚಾರಗಳು ಹೆಚ್ಚು ಜಾಗೃತಗೊಂಡಿರುವುದನ್ನು ಒತ್ತಿ ಹೇಳುತ್ತದೆ. ಈ ಬಗೆಯ ಆಲೋಚನೆಗಳು ನಾಡಿನ ಸಂಸ್ಕೃತಿಯ ಗ್ರಹಿಕೆಯಲ್ಲಿ ಅವರಿಗಿದ್ದ ಸೂಕ್ಷ್ಮ ಒಳನೋಟಗಳನ್ನು ಹೇಳುತ್ತವೆಯಲ್ಲದೆ ಶತ ಶತಮಾನಗಳ ಸಾಮುದಾಯಿಕ ಪ್ರಜ್ಞೆಯನ್ನೂ ಅನಾವರಣಗೊಳಿಸಿವೆ. ವಂಚಿತರಿಗೆ, ಅಲಕ್ಷಿತರಿಗೆ, ಮಾನ್ಯರಿಗೆ ಸಲ್ಲಬೇಕಾದ ಗೌರವ ಪುರಸ್ಕಾರಗಳನ್ನು ತಪ್ಪಿಹೋಗದ ರೀತಿಯ ಕಾಳಜಿ ಮೊಯಿಲಿ ಅವರ ಮಾತುಗಳಲ್ಲಿ ಅಡಗಿದೆ. ಈ ನಾಡಿನ ಪ್ರಗತಿಯ ದೃಷ್ಟಿಯಲ್ಲಿ ಅವರ ಮುಂದಾಲೋಚನಾ ಕ್ರಮಗಳು, ಚಿಂತನೆಗಳು ಈ ಹೊತ್ತಿಗೂ ಹೇಗೆ ಪ್ರಸ್ತುತಗೊಳ್ಳುತ್ತಿವೆ ಎಂಬುದಕ್ಕೆ ಅವರ 'ನುಡಿ-ಕಾಣಿಕೆ'ಯ ವಿಚಾರಗಳೇ ಜ್ವಲಂತ ಸಾಕ್ಷಿ.

**'ರಾಷ್ಟ್ರೀಯ ಚಿಂತನ ದರ್ಶನ'**: ಎಂ.ವೀರಪ್ಪ ಮೊಯಿಲಿ ಅವರ 'ರಾಷ್ಟ್ರೀಯ ಚಿಂತನ ದರ್ಶನ' 2003ರಲ್ಲಿ ಪ್ರಕಟವಾದ ಪುಸ್ತಕವೇ ಆಗಿರುತ್ತದೆ. 1997 ರಿಂದ 2001ರವರೆಗಿನ ದೇಶದ ಸಮಕಾಲೀನ ವಿದ್ಯಮಾನಗಳ ಕುರಿತು ಬರೆದ ಲೇಖನಗಳ ಸಮಗ್ರ ಸಂಗ್ರಹವಿದು. ಮೊಯಿಲಿ ಅವರು ಕನ್ನಡ ವಿದ್ವತ್ ಲೋಕದಲ್ಲಿ ಒಬ್ಬ ರಾಜಕಾರಣಿಗಿಂತ, ಲೇಖಕರಾಗಿ ಹೆಚ್ಚು ಪರಿಗಣಿಸಲ್ಪಟ್ಟವರು. ಉಳಿದ ರಾಜಕಾರಣಿಗಳಂತೆ ಮೊಯಿಲಿ ಅವರು ಕಲೆ ಸಾಹಿತ್ಯಗಳನ್ನು ಕೇವಲ ತೋರಿಕೆಗೆ ಪ್ರೀತಿಸಿದವರಲ್ಲ. ಮೊಯಿಲಿ ಸ್ವತಃ ಸೂಕ್ಷ್ಮ ಸಂವೇದಿ ಲೇಖಕರು.

ಹೀಗೆ, ರಾಜಕಾರಣಿಯೊಬ್ಬರು ಲೇಖಕರಾಗಿ ಜನಪ್ರಿಯಗೊಳ್ಳತೊಡಗಿದಂತೆ ಅವರನ್ನು ಹಲವು ರಿಯಾಯಿತಿಗಳ ಮೂಲಕ ನೋಡುವ ಪ್ರವೃತ್ತಿಯನ್ನು ನಮ್ಮ ಕೆಲವು ವಿಮರ್ಶಕರು ರೂಢಿಸಿಕೊಂಡಿದ್ದಾರೆ. ಮೊಯಿಲಿ ಅವರನ್ನು ಈ ಬಗೆಯ ರಿಯಾಯಿತಿಗಳ ಮೂಲಕ ನೋಡುವ ಅಗತ್ಯವಿಲ್ಲ. ಈ ಸಂಕಲನದ ಹೆಸರೇ 'ರಾಷ್ಟ್ರೀಯ ಚಿಂತನ ದರ್ಶನ'. ಹೆಸರೇ ಹೇಳುವಂತೆ 'ರಾಷ್ಟ್ರೀಯವೆನ್ನಿಸುವ' ರಾಜಕೀಯ ಸಂಗತಿಗಳನ್ನು ಮೊಯಿಲಿ ಅವರು ಈ ಪುಸ್ತಕದಲ್ಲಿ ವಿಶ್ಲೇಷಿಸಲು

ಯತ್ನಿಸುತ್ತಾರೆ. ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡವೆಂಬ ವಿಶಿಷ್ಟ ಜಿಲ್ಲೆಯ ಅತ್ಯಂತ ಹಿಂದುಳಿದ ಸಮುದಾಯಕ್ಕೆ ಸೇರಿದ ರಾಜಕಾರಣಿಯೊಬ್ಬರು ಹೀಗೆ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಮಹತ್ವ ಪಡೆಯುವುದು ಸಂತಸದ ವಿಷಯ. ಆದರೆ ಭಾರತದಂತಹ ದೇಶದ ಶಕ್ತಿ ರಾಜಕಾರಣವು ತನ್ನ ವಾತಾಪಿ ಗರ್ಭದಲ್ಲಿ ಜನಪರ ರಾಜಕಾರಣಿಗಳನ್ನು ಅರಗಿಸಿಕೊಂಡ ಉದಾಹರಣೆಗಳು ಅನೇಕ ಇರುತ್ತವೆ. ಮೊಯಿಲಿ ಅವರು ಸ್ವತಂತ್ರ ವ್ಯಕ್ತಿತ್ವದ ಬದ್ಧತೆಯ ರಾಜಕಾರಣಿ. ತಮ್ಮ ಸಾಮಾಜಿಕ ಕಳಕಳಿ ಮತ್ತು ಪ್ರಾಮಾಣಿಕತೆಯ ವಿಚಾರದಲ್ಲಿ ಯಾವತ್ತೂ ಎಚ್ಚರಿಕೆ ವಹಿಸುತ್ತಾ ಬಂದವರು. ಈ ಕಾರಣದಿಂದಾಗಿ ಅವರ ಈ ವೈಚಾರಿಕ ಗದ್ಯ ಸಂಕಲನಕ್ಕೆ ಅದರದ್ದೇ ಆದ ಮಹತ್ವವಿದೆ.

ಈ ಮೇಲಿನ ಎರಡು ಸಂಕೀರ್ಣ ಕೃತಿಗಳಲ್ಲದೆ, ಇನ್ನು ಎರಡು ಸಂಕೀರ್ಣ ಕೃತಿಗಳನ್ನು ಮೊಯಿಲಿಯವರು ರಚಿಸುತ್ತಾರೆ. ಅವುಗಳೆಂದರೆ 'ಕಿರು ದಾರಿ ಹೆದ್ದಾರಿ' ಮತ್ತು 'ಒಣಬಿಧ ಊ ಖಟಿಜಾಚಿ'.

**ಕಾದಂಬರಿಗಳು**: ಮೊಯಿಲಿ ಅವರು ನಾಲ್ಕು ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳೆಂದರೆ; 'ಸುಳಿಗಾಳಿ' (1985), 'ಸಾಗರದೀಪ' (1986), 'ಕೊಟ್ಟ' (1993) ಮತ್ತು 'ತೆಂಬರೆ' (1999). ಈ ಕಾದಂಬರಿಗಳು ಅಧ್ಯಯನದ ಪ್ರಧಾನ ವಿಷಯವಾಗಿದ್ದರಿಂದ ಇವುಗಳ ಕಥಾವಸ್ತು, ಪ್ರಾಯೋಗಿಕ ವಿಮರ್ಶೆ, ಕಾದಂಬರಿಗಳು ಕೂಡ ವಿಶೇಷತೆಯಿಂದಲೇ ಕೂಡಿರುತ್ತವೆ. ಮೊಯಿಲಿ ಅವರು ಭವಿಷ್ಯದ ಚಿಂತನೆಗಳ ಬಗೆಗೆ ಕನಸು ಕಾಣುತ್ತಾ ಆ ಕನಸುಗಳನ್ನು ನನಸಾಗಿಸುವ ಇಚ್ಛಾಶಕ್ತಿಯನ್ನು ಹೊಂದಿದವರಾಗಿದ್ದಾರೆ. ಅವರು ಅವರ ಕಾಲಘಟ್ಟದ ಅತ್ಯಂತ ಸೂಕ್ಷ್ಮ ಪ್ರವೃತ್ತಿಯ ಮತ್ತು ಮಾನವೀಯ ಮೌಲ್ಯಗಳ ಸ್ಪಂದನದ ನಾಯಕರಾಗಿದ್ದಾರೆ. ಸೂಕ್ಷ್ಮಗ್ರಾಹಿತ್ವದ ಅಧ್ಯಯನ ಶೀಲ ನಾಯಕರಾಗಿ ಮೊಯಿಲಿ ಅವರು ತಮ್ಮ ಕಿರಿಯ ವಯಸ್ಸಿನಲ್ಲಿಯೇ ರಾಜಕೀಯ ವಾಸ್ತವಗಳನ್ನು ಅರಿತುಕೊಂಡವರಾಗಿದ್ದರೆಂದು ಅವರು ಹೇಳುತ್ತಿರುತ್ತಾರೆ. "ಕಾರಿನಲ್ಲಿ ಪ್ರಯಾಣಿಸುವಾಗಿನ ಒಂದಿಷ್ಟು ಚಿಕ್ಕಪುಟ್ಟ ತೂಕಡಿಕೆಗಳೇ ನಾನು ಪಡೆಯುತ್ತಿರುವ ನಿದ್ದೆ!". ಒರ್ವ ಧೀರನ ನಿಷ್ಠುರವಾದ ಬದ್ಧತೆಯ ಉತ್ತಮ ಹಾಸ್ಯದೊಂದಿಗೆ ಸಂತುಲಿತವಾಗುವ ಅತ್ಯುತ್ಸಾಹವು ಅವರಲ್ಲಿದೆ. ಅವರು ಭಾರತದ ಹೃದಯ ಮತ್ತು ಅಂತರಾತ್ಮಗಳು ನಿಜವಾದ ಪ್ರತಿನಿಧಿ.

ಹೀಗೆ, ಎಂ.ವೀರಪ್ಪ ಮೊಯಿಲಿ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದಂತಹ ಸಾಹಿತ್ಯ ಸಂಪತ್ತನ್ನು ನೀಡಿದ್ದಾರೆ. ಇವುಗಳಲ್ಲಿ ಮಾನವೀಯತೆಯ ತುಡಿತ ಮತ್ತು ಮಿಡಿತವಿದೆ. ಮತ್ತೇ, ಅವರು ಬಾಲ್ಯ ಮತ್ತು ಬದುಕಿನ ಹಾದಿಯಲ್ಲಿ ಅನುಭವಿಸಿದ್ದ ಮತ್ತು ಕಂಡುಕೊಂಡಂತಹ ಅನೇಕ ಅನೇಕ ಅಂಶಗಳನ್ನು ನಾಟಕಗಳಲ್ಲಿ, ಕವಿತೆಗಳಲ್ಲಿ, ಗದ್ಯಗಳಲ್ಲಿ ಹಾಗೂ ಕಾದಂಬರಿಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಇವುಗಳು ಸಮಕಾಲಿನ ಸಂದರ್ಭದಲ್ಲಿ ಸಾಹಿತ್ಯಕ್ಕೆ ಹೆಚ್ಚಿನ ಮೇರಗನ್ನು ನೀಡುವುದೇ ಆಗಿರುತ್ತದೆ.

**ಪರಾಮರ್ಶನ ಗ್ರಂಥಗಳು**

1. ಎಂ. ವೀರಪ್ಪ ಮೊಯಿಲಿ : **ಸಾಗರದೀಪ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, 1986.
2. ಎಂ. ವೀರಪ್ಪ ಮೊಯಿಲಿ : **ಸುಳಿಗಾಳಿ,** ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು, 1985.
3. ಎಂ. ವೀರಪ್ಪ ಮೊಯಿಲಿ : **ತೆಂಬರೆ**, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, 1999.
4. ಎಂ. ವೀರಪ್ಪ ಮೊಯಿಲಿ : **ಕೊಟ್ಟ,** ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು, 1993.
5. ಎಂ.ವೀರಪ್ಪ ಮೊಯಿಲಿ : **ಕಿರುದಾರಿ ಹೆದ್ದಾರಿ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2007.
6. ಎಂ. ವೀರಪ್ಪ ಮೊಯಿಲಿ ಮತ್ತು : **ಹಾಲು–ಜೇನು (ಸಮಗ್ರ ಕವಿತೆಗಳು)–** ಮಾಲತಿ ವೀರಪ್ಪ ಮೊಯಿಲಿ ಅಂಕಿತ ಎಂಟರಪ್ರೈಸೆಸ್, ಬೆಂಗಳೂರು, 1997.
7. ಎಚ್.ಟಿ. ಪೋತೆ : **ಶ್ರೀ ರಾಮಾಯಣ ಮಹಾಅನ್ವೇಷಣಂ –ದರ್ಶನ**, ತಿಪ್ಪಣ್ಣಂಬು ಪ್ರಕಾಶನ, ಹಂಜಗಿ ತಾ. ಇಂಡಿ, ಜಿ.ಬಿಜಾಪುರ, 2002.
8. ಚಂದ್ರಶೇಖರ ಕಂಬಾರ ಮತ್ತು : **ತೆಂಬರೆಯ ತರಂಗ**–ಅಕ್ಕ ಪ್ರಕಾಶನ, ಸಿ.ಆರ್. ಗೋವಿಂದರಾಜು ಕುವೆಂಪುನಗರ, ಕುಣಿಗಲ್ಲು, 2007.
9. ವೈ. ಉಮನಾಥ ಶೆಣೈ : **ಕನ್ನಡ ಸಾಹಿತ್ಯಕ್ಕೆ ಮೂಡುಬಿದರೆ ಲೇಖಕರ ಕೊಡುಗೆ**, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2003.
10. ಶಿವರಾಮ ಕಾರಂತ್ : **ಕರ್ನಾಟಕದ ಕರಾವಳಿ–** ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು. 1983.